**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ</u>**

<u>ಸೆಷನ್ಸ್ ಕೇಸ್ ನಂಃ 6/2020</u> <u>ಪಿ.ಡಬ್ಲ್ಯೂಃ 13</u>

<u>ಸಿ.ಡಬ್ಲ್ಯೂಃ 33</u>

ಸಾಕ್ಷಿದಾರರ ಹೆಸರು ಸಾದಿಕ್

ತಂದೆಯ ಹೆಸರು ಹಾಜಬ್ಬ

ವಯಸ್ಸು 55 ವರ್ಷ

ಉದ್ಯೋಗ ಗುಜುರಿ ವ್ಯಾಪಾರ

ವಿಳಾಸ ಮಣಿಪುರ, ಕಟಪಾಡಿ

ದಿನಾಂಕಃ 08-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ</u>**

1) ನನಗೆ ಚಾಸಾ-1 ಗೊತ್ತು, ಅವರು ಕಟಪಾಡಿಯ ಕಲ್ಲಾಪು ಎಂಬಲ್ಲಿ ಗುಜುರಿ ಅಂಗಡಿ ನಡೆಸುತ್ತಿದ್ದರು. ನಾನು ಅವರ ಬಳಿ ಕೆಲಸ ಮಾಡಿಕೊಂಡಿದ್ದೆ. 2019 ರ ಸಮಯದಲ್ಲಿ ಚಾಸಾ-1 ಇವರ ವಾಹನ ಕಳ್ಳತನವಾಗಿದ್ದ ಬಗ್ಗೆ ನನಗೆ ಮಾಹಿತಿ ಇಲ್ಲ. ಮತ್ತು ಆ ವಾಹನವನ್ನು ಪೊಲೀಸರು ಪತ್ತೆ ಮಾಡಿದ್ದ ಬಗ್ಗೆ ಸಹ ನನಗೆ ಗೊತ್ತಿಲ್ಲ. ಪೊಲೀಸರು ನನ್ನನ್ನು ಯಾವುದೇ ಪಂಚನಾಮೆಗೆ ಕರೆಯಿಸಿಲ್ಲ. ಸುಮಾರು 4-5 ವರ್ಷಗಳ ಹಿಂದೆ ಕಾಪು ಠಾಣೆಯಲ್ಲಿ ಪೊಲೀಸರು ನನ್ನ ಸಹಿ ಪಡೆದಿದ್ದರು, ಯಾವ ಕಾರಣಕ್ಕೆ ಎಂದು ಗೊತ್ತಿಲ್ಲ. ನನಗೆ ಈಗ ತೋರಿಸಿದ ನಿಪಿ-16 ಮತ್ತು 17 ರಲ್ಲಿರುವ ಸಹಿಗಳು ನನ್ನದೇ ಇದೆ. ಅವುಗಳನ್ನು ಯಾವ ಕಾರಣಕ್ಕೆ ಪಡೆದಿದ್ದರು ಎಂದು ಗೊತ್ತಿಲ್ಲ. ಅವುಗಳನ್ನು ನಿಶಾನೆ -16(ಬಿ) ಮತ್ತು 17(ಬಿ) ಎಂದು ಗುರುತಿಸಿದೆ. ಪೊಲೀಸರು ನನ್ನನ್ನು ವಿಚಾರಿಸಿಲ್ಲ.

**( ಈ ಹಂತದಲ್ಲಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ಕೊಡಲಾಯಿತು)**

ಪಾಟಿಸವಾಲುಃ ಸರಕಾರಿ ಅಭಿಯೋಜಕರಿಂದಃ

1) ಪೊಲೀಸರು ತಾರೀಕು 20-07-2019 ರಂದು ಬೆಳಿಗ್ಗೆ 4.30 ಗಂಟೆಗೆ ನಾನು ಕಟಪಾಡಿ ಜಂಕ್ಷನ್ ಕಡೆಗೆ ಹೋಗುತ್ತಿದ್ದಾಗ, ಕಾಪು ಪೊಲೀಸರು ನನ್ನನ್ನು ಮತ್ತು ಚಾಸಾ-31 ಇವರನ್ನು ಪಂಚರಾಗಿ ಸಹಕರಿಸಲು ಕೋರಿದ್ದರು ಎಂದರೆ ಸರಿಯಲ್ಲ. ಆಗ ಪೊಲೀಸರ ಬಳಿಯಲ್ಲಿ ಒಂದು ಇಂಡಿಕಾ ಕಾರು ನಂಬ್ರ ಕೆಎ-20-ಎಬಿ-8799 ನೇ ಕಾರನ್ನು ಮತ್ತು ಅದರಲ್ಲಿ ಇದ್ದ 1 ರಿಂದ 4 ನೇ ಆರೋಪಿತರನ್ನು ವಿಚಾರಣೆಗಾಗಿ ಅಲ್ಲಿ ನಿಲ್ಲಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಪೊಲೀಸರ ವಿಚಾರಣೆಯಿಂದ ಆ ಕಾರಿನಲ್ಲಿದ್ದವರು, ಕಾರುಗಳ ಕಳ್ಳತನಕ್ಕಾಗಿ ಕಾಪುವಿನ ಕಡೆಗೆ ಹೋಗುತ್ತಿದ್ದಾರೆಂದು ಪೊಲೀಸರಿಗೆ ತಿಳಿದಿತ್ತು ಎಂದರೆ ಸರಿಯಲ್ಲ. ಆದಿನ ನಿಲ್ಲಿಸಿದ್ದ ಆರೋಪಿತರೇ ಚಾಸಾ-1 ಈತನ ಪಿಕಪ್ ವಾಹನವನ್ನು ಕದ್ದಿದ್ದರು ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಆಗ ನಮ್ಮ ಸಮಕ್ಷಮ ಪೊಲೀಸರು ಆರೋಪಿತರನ್ನು ವಿಚಾರಣೆಗೆ ಪಡೆದುಕೊಂಡು, ಅವರ ವಶದಲ್ಲಿದ್ದ ಒಂದು ಕಾರು, ಕಾರಿನ ಒಳಗೆ ಇದ್ದ ನಂಬ್ರ ಪ್ಲೇಟ್, ಮತ್ತು 34 ಕೀಲಿಗಳ ಒಂದು ಬಂಚ್ ನ್ನು ವಶಪಡಿಸಿಕೊಂಡು, ಅದಕ್ಕಾಗಿ ಅಲ್ಲಿಯೇ ನಿ.ಪಿ-16 ರ ಪಂಚನಾಮೆಯನ್ನು ಬರೆದುಕೊಂಡು, ಓದಿ ಹೇಳಿ ,ನಮ್ಮ ಸಹಿ ಪಡೆದಿದ್ದರು ಎಂದರೆ ಸರಿಯಲ್ಲ.

2) ಆದಿನ ಕಾರಿನಲ್ಲಿದ್ದ 3 ನೇ ಆರೋಪಿ, ಆತನ ಹೇಳಿಕೆಯಲ್ಲಿ ಪಿರ್ಯಾಧಿಯ ವಾಹನದ ಬಗ್ಗೆ ಮಾಹಿತಿ ನೀಡಿದ್ದರು ಎಂದರೆ ಸರಿಯಲ್ಲ. ಅದಕ್ಕಾಗಿ ಪೊಲೀಸರು ಸದರಿ ಆರೋಪಿಯೊಂದಿಗೆ ನಮ್ಮನ್ನು ಸಹ ಕರೆದುಕೊಂಡು ಎನ್ .ಆರ್. ಪುರದ ಆತನ ಮನೆಯ ಬಳಿ ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ಅಲ್ಲಿ ನಿಂತಿದ್ದ ಪಿಕಪ್ ವಾಹನವನ್ನು 3 ನೇ ಆರೋಪಿ ತೋರಿಸಿ, ಹೇಳಿದ್ದರ ಮೇರೆಗೆ ಪೊಲೀಸರು ನನ್ನ ಮತ್ತು ಚಾಸಾ-31 ಇವರ ಸಮಕ್ಷಮ ಬೆಳಗ್ಗಿನ 11.00 ರಿಂದ 12.00 ಗಂಟೆಯ ಸಮಯದಲ್ಲಿ ನಿಪಿ-17 ರ ಪಂಚನಾಮೆಯನ್ನು ಬರೆದಿದ್ದರು ಎಂದರೆ ಸರಿಯಲ್ಲ.

3) ಈ ಬಗ್ಗೆ ನಾನು ತಾರೀಕು 31-07-2019 ರಂದು ಈಗ ಓದಿದ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು **ನಿಶಾನೆ ಪಿ-20** ಎಂದು ಗುರುತಿಸಿದೆ. ನನಗೆ ನಿಪಿ-16 ಮತ್ತು 17 ರ ಬಗ್ಗೆ ಮಾಹಿತಿ ಇದ್ದರೂ ಸಹ,

ಈಗ ಆರೋಪಿತರಿಗೆ ಸಹಾಯವಾಗಲೀ ಎಂದು ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಶ್ರೀ ಎ.ಬಿ.ಹೆಚ್. ವಕೀಲರಿಂದ 3 ಮತ್ತು 4 ನೇ ಆರೋಪಿತರ ಪರವಾಗಿ ಇಲ್ಲ ಎಂದು ಸಲ್ಲಿಸಿದ್ದಾರೆ**

**ಮರು ವಿಚಾರಣೆ - ಇಲ್ಲ -**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ